ಕಾರ್ಮಿಕರು ಹಾಗೂ ಮ್ಯಾನೇಜ್‌ಮೆಂಟ್ ಮಧ್ಯೆ ಆದ ಒಪ್ಪಂದ ಮುಗಿದಿದೆ. ಆದರೆ ಮ್ಯಾನೇಜ್‌ಮೆಂಟ್‌ನವರು ಹೊಸ ಒಪ್ಪಂದಕ್ಕೆ ಬರುತ್ತಿಲ್ಲ. ಆದಕಾರಣ ೧೩-೩-೧೯೯೦ ರಿಂದ ಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿದ್ದಾರೆ.

ಮೂರು ವರ್ಷಗಳ ಹಿಂದೆ ಆದ ವೇಜ್ ಅಗ್ರಿಮೆಂಟ್ ನಂತೆಯೇ ಈಗ ಪಂತ್ಕೊಂದು ಅಗ್ರಿಮೆಂಟ್ ಮಾಡಿಕೊಳ್ಳಿ ಎಂದು ಕಾರ್ಮಿಕರ ಬೇಡಿಕೆ ಇದೆ. ಆದರೆ ಮ್ಯಾನೇಜ್‌ಮೆಂಟ್‌ನವರು ಸರ್ಕಾರ ನಮಗೆ ೧/೧೦ ಟೇಬಲ್‌ನ್ನು ಸಪ್ಲೈ ಮಾಡುತ್ತಿಲ್ಲ. ಆದ್ದರಿಂದ ಹೊಸ ಅಗ್ರಿಮೆಂಟ್ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರ ೨೫೦೦ ಕಾರ್ಮಿಕರ ಹಿತದೃಷ್ಟಿಯಿಂದ ಮಾಲೀಕರ ಜೊತೆ ಮಾತನಾಡಿ ಅವರಿಗೆ ನ್ಯಾಯ ಒದಗಿಸಿಕೊಡಲು ಮಧ್ಯ ಪ್ರವೇಶ ಮಾಡಬೇಕೆಂಬ ವಿಷಯದ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಂಡಿಯನ್ ಪ್ಲೈವುಡ್ ಕಾರ್ಖಾನೆಯ ನೌಕರರ ಮಂಷ್ಕರದ ಬಗ್ಗೆ ಏನು ವಿಚಾರ ಎತ್ತಿದ್ದಾರೆ, ಈ ಬಗ್ಗೆ ಸಂಬಂಧಪಟ್ಟ ಸನ್ಮಾನ್ಯ ಸಚಿವರಿಗೆ ಹೇಳಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲು ತಿಳಿಸುತ್ತೇನೆ.

೨ ಉಳ್ಳಾಲದಲ್ಲಿರುವ ಪೋಲೀಸ್ ಸ್ಟೇಷನ್ನಿಗೆ ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲದಲ್ಲಿರುವ ಪೋಲೀಸ್ ಸ್ಟೇಷನ್ ಸುಮಾರು ಒಂದು ಲಕ್ಷ ಜನರ ಪರಿಮಿತಿಯ ಉಸ್ತುವಾರಿ ನೋಡಿಕೊಳ್ಳಬೇಕಾಗಿದೆ. ಅನೇಕ ರೀತಿಯ ತಕ್ಷೀರುಗಳು, ಹಿಂದೂ ಮುಸ್ಲಿಮ್ ಕ್ಲೇಶಗಳು ಈ ಭಾಗದಲ್ಲಿ ಆಗಾಗ ಜರುಗುತ್ತಲಿವೆ. ಇಂತಹ ಪರಿಸ್ಥಿತಿಯಲ್ಲಿ ಈ ಪೋಲೀಸು ಸ್ಟೇಷನ್ನಿನಲ್ಲಿ ಬರೀ ೧೨ ಜನ ಮಾತ್ರ ಪೋಲೀಸರಿದ್ದಾರೆ. ಇದು ಏನೇನೂ ಸಾಕಾಗುವುದಿಲ್ಲ. ಕಳೆದ ೩ ವರ್ಷಗಳಿಂದ ಈ ಸ್ಟೇಷನ್ನಿಗೆ ೧೫ ಮಂದಿ ಹೆಚ್ಚಿಗೆ ಪೋಲೀಸರನ್ನು ನೇಮಕ ಮಾಡಬೇಕೆಂದು ಕೇಳುತ್ತಾ ಬಂದರೂ ಇನ್ನೂ ನೇಮಕವಾಗಿಲ್ಲ. ಇದರಿಂದಾಗಿ ತುಂಬಾ ತೊಂದರೆ, ಕಷ್ಟಗಳು ಉಂಟಾಗಿರುತ್ತವೆ. ೨೦ ಗ್ರಾಮಗಳು ಇದಕ್ಕೆ ಒಳಪಟ್ಟಿರುತ್ತದೆ. ಆದಕಾರಣ, ಉಳ್ಳಾಲ ಪೋಲೀಸ್ ಸ್ಟೇಷನ್ನಿಗೆ ಕನಿಷ್ಠ ೧೦ ಜನ ಹೆಚ್ಚಿಗೆ ಪೋಲೀಸರ ನೇಮಕವನ್ನು ಆಗತ್ಯವಾಗಿ ಮಾಡುವಂತಾಗಬೇಕು. ಈ ಕುರಿತು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ೨೯-೧೧-೧೯೮೬ ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಮಂಗಳೂರು ಎಜ್ಯುಕೇಷನ್ ಸೆಂಟರ್‌ನ ಸಿಲ್ವರ್ ಜುಬಿಲಿಯ ಸಮಾರಂಭದಲ್ಲಿ ಭಾಗವಹಿಸಲು ಹೋದ ಸಂದರ್ಭದಲ್ಲಿ ಉಳ್ಳಾಲ ಪೋಲೀಸ್ ಸ್ಟೇಷನ್ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುತ್ತೇನೆಂದು ಹೇಳಿದ್ದರು. ಆದರೆ ಈಗ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸುವ ವಿಚಾರದಲ್ಲಿ ಹಣಕಾಸಿನ ತೊಂದರೆ ಇರುವುದರಿಂದ ಈ ಒಂದು ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸುವಂಥ ಕೆಲಸವನ್ನು ಹಂತಹಂತವಾಗಿ ಮಾಡಲಿಕ್ಕೆ ಸರ್ಕಾರ ಆಲೋಚನೆ ಮಾಡುತ್ತಾ ಇದೆ. ಇದನ್ನು ಹೆಚ್ಚುವರಿ ಮಾಡಲಿಕ್ಕೆ ಸರ್ಕಾರದ ಮುಂದೆ ಪ್ರಸ್ತಾವ ಈ ರೀತಿ ಇದೆ. ಒಂದು ಹೆಚ್ಚುವರಿ ಸಬ್‌ಇನ್‌ಸ್ಪೆಕ್ಟರ್ ಒಂದು ಹೆಚ್ಚುವರಿ ಅಸಿಸ್ಟೆಂಟ್ ಸಬ್‌ಇನ್‌ಸ್ಪೆಕ್ಟರ್, ಎರಡು ಹೆಡ್‌ಕಾನ್‌ಸ್ಟೇಬಲ್ಸ್, ಮತ್ತು ೧೦ ಪೋಲೀಸ್ ಕಾನ್‌ಸ್ಟೇಬಲ್ಸ್. ಇಷ್ಟು ಸಂಖ್ಯೆಯನ್ನು ಹೆಚ್ಚುವರಿ ಮಾಡಬೇಕೆಂಬ ಪ್ರಸ್ತಾವ ಸರ್ಕಾರದ ಮುಂದೆ ಇದೆ. ಅದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

೩ ಸಹಕಾರ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಹಾಗೂ ನೌಕರರ ಸೇವಾಹಿರಿತನ ಇತ್ಯಾದಿ ಬಗ್ಗೆ

ಶ್ರೀ ಜೆ. ಹೆಚ್. ಪಾಟೀಲ.—ಮಾನ್ಯ ಅಧ್ಯಕ್ಷರೇ,

೧) ಸಹಕಾರ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ?

೨) ಯಾವ ಯಾವ ಹಂತದಲ್ಲಿ ಎಷ್ಟು ಖಾಲಿ ಹುದ್ದೆಗಳಿವೆ ?

೩) ಇವುಗಳಲ್ಲಿ ನೇರವಾಗಿ ನೇಮಿಸಬೇಕಾಗಿರುವ ಹುದ್ದೆಗಳು ಎಷ್ಟು ?

೪) ಬಡ್ತಿ ನೀಡಿ ಭರ್ತಿ ಮಾಡುವ ಹುದ್ದೆಗಳು ಎಷ್ಟು ?

ಡಿ) ಖಾಲಿ ಇರುವ ಹುದ್ದೆಗಳು ಎಷ್ಟು ಕಾಲದಿಂದ ಭರ್ತಿ ಮಾಡದೆ ಉಳಿದಿದೆ ?

ಇ) ನಿರೀಕ್ಷಕರು, ಮೊದಲನೇ ದರ್ಜೆ ಹಾಗೂ ಎರಡನೇ ದರ್ಜೆ ಸಹಾಯಕರಿಂದ ದರ್ಜೆಗೆ ಬಡ್ತಿನೀಡುವ ಬಗ್ಗೆ ಇಲಾಖೆಯು ಏನು ಕ್ರಮ ಕೈಗೊಂಡಿದೆ ?

ಎಫ್) ಜಿಲ್ಲೆಯ ಉಪನಿಬಂಧಕರುಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು, ಹತ್ತಿ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಎಣ್ಣೆ ಗಿರಣಿಗಳ ಕಾರ್ಯ ನಿರ್ವಾಹಕರುಗಳ ಮತ್ತು ಇತರೆ ಸಹಕಾರ ಸಂಸ್ಥೆಗಳ ಕಾರ್ಯ ನಿರ್ವಾಹಕ ನಿರ್ದೇಶಕರುಗಳ ಕಾರ್ಯದರ್ಶಿಗಳ ಎಷ್ಟು ಹುದ್ದೆಗಳು ಖಾಲಿ ಬಿದ್ದಿರುತ್ತವೆ ?

ಜಿ) ಖಾಲಿ ಬಿದ್ದಿರುವ ಹುದ್ದೆಗಳಿಂದ ಸರ್ಕಾರದ-ಸಹಕಾರ ಸಂಸ್ಥೆಗಳ. ಸಾರ್ವಜನಿಕ ಕೆಲಸಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಹೆಚ್) ಹೀಗೆ ಖಾಲಿ ಬಿದ್ದಿರುವ ಹುದ್ದೆಗಳನ್ನು ತುಂಬಲು ಇಲಾಖೆಯು ಏನು ಕ್ರಮ ಕೈಗೊಂಡಿದೆ ?

ಐ) ನಾನ್ ಗೆಜೆಟೆಡ್ ನೌಕರರ ಸೀನಿಯಾರಿಟಿ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ರಿವ್ಯೂ ಮಾಡಿ ಪರಿಂಬಡ್ತಿ ನೀಡಲು ನ್ಯಾಯಾಲಯದ ಆದೇಶ ಇದ್ದರೂ ಇನ್ನೂ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಜೆ) ಸರ್ಕಾರದ ಗಮನಕ್ಕೆ ಬಂದಿದ್ದರೆ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಕೆ) ಇನ್ನು ಎಷ್ಟು ದಿನಗಳಲ್ಲಿ ಈ ಕೆಲಸ ಸಂಪೂರ್ಣವಾಗುವುದೆಂಬುದನ್ನು ಸರ್ಕಾರ ತಿಳಿಸುತ್ತದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸಹಕಾರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಈ ಬಗ್ಗೆ ಸಂಬಂಧಪಟ್ಟ ಸನ್ಮಾನ್ಯ ಸಚಿವರಿಗೆ ಈ ವಿಚಾರವನ್ನು ಹೇಳಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದು.

೪. ಕೊಲ್ಲೂರು, ಸೋಮೇಶ್ವರ, ಮರವಂತೆಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸುವುದು.

೧-೦೦ ಪಿ. ಎಂ.

ಶ್ರೀ ಜಿ. ಎಸ್. ಆಚಾರ್.—ಪ್ರಸಿದ್ಧ ಯಾತ್ರಾಸ್ಥಳವಾದ ಶ್ರೀ ಮೂಕಾಂಬಿಕಾ ದೇವಾಲಯ, ಅಭಿವೃದ್ಧಿ ಹೊಂದುತ್ತಿರುವ ಸುಂದರ ಸುರಕ್ಷಿತ ಅಭಯಾರಣ್ಯ ಕಣ್ಮನ ತಣಿಸುವ ಕೊಡಚಾದ್ರಿಯ ರಮ್ಯ ಪರ್ವತ ಶ್ರೇಣಿ. ಅಪೂರ್ವವಾದ ಪವಿತ್ರ ವನ. ಜಿಗಿವ ಜಲಪಾತ, ನಲಿವ ನದಿ, ನವಿಲುಗಳು ಇರುವ ಕೊಲ್ಲೂರಿನಲ್ಲಿ ಒಂದು ಕೀಲೊ ಮೀಟರ್ ಉದ್ದಕ್ಕೂ ರಾಷ್ಟ್ರೀಯ ಹೆದ್ದಾರಿಯಂ ಇಕ್ಕೆಡೆಗಳಲ್ಲಿ ಸವಿಂದ್ರ ಮತ್ತು ನದಿಯನ್ನು ನೋಡಬಹುದಾದ, ವಿಶ್ವದಲ್ಲಿ ಇನ್ನೆಲ್ಲೂ ಕಾಣಸಿಗದ ಜೇತೋಹಾರಿಯಾದ ಸುರಮ್ಯ ಪ್ರಶಾಂತ ನೋಟ ಇರುವ ಚಿತ್ತಾಕರ್ಷಕ ಮರವಂತೆ ತೆಂಗಿನ ತೋಟಗಳ ನಡುವೆ ಗುಡ್ಡ ಬೆಟ್ಟಕ್ಕೆ ಬಡಿ ದಪ್ಪಳಿಸುವ ಕಡಲತೆರೆಗಳ ವಿಹಂಗಮ ದೃಶ್ಯದಿಂದೊಡಗೂಡಿ ಚಲನಚಿತ್ರ ನಿರ್ಮಾಪಕರನ್ನು ವಿಹಾರಿಗಳನ್ನೂ ಪದೇ ಪದೇ ಆಕರ್ಷಿಸುವ ತಾಣವಾದ ಬೈಂದೂರಿನ ಒಳಿಯ ಸೋಮೇಶ್ವರ ಈ ಮೂರು ಕಡೆಗಳಲ್ಲಿ ರಾಜ್ಯ ಸರ್ಕಾರದಿಂದ ಪ್ರವಾಸಿ ಧಾಮಗಳನ್ನು ಸ್ಥಾಪಿಸಿ ಸಂಚಾರಿ ಸ್ವದೇಶಿ ಹಾಗೂ ವಿದೇಶಿ ಪ್ರವಾಸಿಗರಿಗೆ ಅಗತ್ಯವುಳ್ಳ ವ್ಯವಸ್ಥೆ ಕಲ್ಪಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ವಾರ್ತಾ, ಪ್ರವಾಸೋದ್ಯಮ, ಮತ್ತು ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಸ್ತಾವನೆ ಮಾಡಿದ್ದಾರೆ-ಕೊಲ್ಲೂರು, ಸೋಮೇಶ್ವರ, ಈ ಪ್ರದೇಶಗಳಲ್ಲಿ ಕೊಲ್ಲೂರು ಪವಿತ್ರವಾದ ಯಾತ್ರಾಸ್ಥಳ. ಸೋಮೇಶ್ವರ ಇದಕ್ಕೆ ಸಂಬಂಧಪಟ್ಟ ಅಭಯಾರಣ್ಯ. ಜೊತೆಗೆ ಆಗುಂಬೆ ಕೂಡ ಇದಕ್ಕೆ ಸಂಬಂಧಪಟ್ಟಿರುವುದರಿಂದ ಇದನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಮಾಡುವುದಕ್ಕೆ ಕೆಲವು ಪ್ರಸ್ತಾವನೆಗಳು ಸರ್ಕಾರದ ಗಮನದಲ್ಲಿವೆ. ಆದಷ್ಟು ಜಾಗ್ರತೆ ಇದನ್ನು ಅನುಷ್ಠಾನ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.